ರಾತ್ರಿ ಊಟಕ್ಕೆ ಮಧುರಾ ಒತ್ತಾಯ ಮಾಡಿದರೂ ಹೋಗದೇ ಕಾಟಿನಮೇಲೆ ಹಾಗೇ ಬಿದ್ದುಕೊಂಡೆ. ಡೈನಿಂಗ್‌ಹಾಲಿನಲ್ಲಿ ಮತ್ತೆ ಅವಳ ಮುಖ ನೋಡುವುದೂ ನನಗೆ ಬೇಡವಾಗಿತ್ತು. ಮನದ ಸಂಭ್ರಮಕ್ಕೆ ದೊಡ್ಡಹೊಡೆತವನ್ನೇ ಕೊಟ್ಟಿದ್ದಳು ಭಾಮಾ.

ಈ ಘಟನೆಯ ನಂತರ ಪ್ರತೀದಿನ ಹಾಸ್ಟೆಲಿನ ಒಳಗೆ ಅಡಿಯಿಡುವಾಗ ಗೊತ್ತಿಲ್ಲದಂತೆ ಮೈ ನಡುಗಲಾರಂಭಿಸಿತು. ಏನೋ ಒಂದು ಗಿಲ್ಟ್ ಸುಖಾಸುಮ್ಮನೇ ಕಾಡಲಾರಂಭಿಸಿತು. ಅವಳೇನಾದರೂ ಹದ್ದಿನ ಕಣ್ಣು ಹಚ್ಚಿ ನೋಡುತ್ತ ಅಲ್ಲಿಯೇ ಎಲ್ಲಾದರೂ ನಿಂತಿದ್ದಾಳೆಯೇ ಎಂದು ಒಮ್ಮೆ ಸುತ್ತಲೂ ಗಮನ ಹರಿಸಿಯೇ ಮೆಟ್ಟಿಲೇರುತ್ತಿದ್ದೆ. ಆದರೆ ಅವಳಿಗೆ ಅದಕ್ಕೆಲ್ಲಾ ಪುರುಸೊತ್ತೇ ಇಲ್ಲವೆನ್ನುವುದು ತಿಳಿಯಲೂ ಹೆಚ್ಚು ದಿನ ಬೇಕಾಗಲಿಲ್ಲ. ಒಂದು ದಿನ ಇಲ್ಲಿದ್ದರೆ ಇನ್ನೊಂದು ದಿನ ಸಿಟಿ ಮಾರ್ಕೆಟ್ಟಿಗೆ ಹೋಗಿರುತ್ತಿದ್ದಳು. ಮತ್ತೊಂದು ದಿನ ಹತ್ತಿರದ ಯಾವುದೋ ಪಿಕ್‌ನಿಕ್. ಕ್ಯಾಂಪಸ್ಸಿಗೆ ಸಂಬಂಧವೇ ಇಲ್ಲದ ಯಾರ್‍ಯಾರೋ ಹುಡುಗರೊಡನೆ ಅವಳ ಸ್ನೇಹ. ಹೇಗೆ, ಎಲ್ಲಿಂದ ಪರಿಚಯ ಮಾಡಿಕೊಳ್ಳುತ್ತಿದ್ದಳೋ ನಮ್ಮಂಥ ಗುಗ್ಗುಗಳಿಗೆ ನಿಜವಾಗಿಯೂ ತಿಳಿಯುತ್ತಿರಲಿಲ್ಲ. ಅವಳ ಗೆಳೆತನದ ಅತಿರಂಜಿತ ಸುದ್ದಿಗಳು ಕ್ಯಾಂಪಸ್ಸಿನ ರಸ್ತೆಗಳಲ್ಲಿ ಹರಿದಾಡತೊಡಗಿದವು. ಹುಡುಗಿಯರು ಕದ್ದುಮುಚ್ಚಿ ಅವಳ ಸುದ್ದಿ ಮಾತನಾಡುವರು. ಗೋಡೆಗಳಿಗೂ ಕಿವಿಗಳಿರುತ್ತವೆ! ಅವಳ ತನಕ ಮಾತು ತಲುಪಿಬಿಟ್ಟರೆ ದಬಾಯಿಸಲು ಹೆದರುವವಳೇ ಅಲ್ಲ. ಮೂರೂ ಮಹಡಿಗಳಿಗೆ ಕೇಳುವಂತೆ ಹುಡುಗಿಯರ ಜನ್ಮ ಜಾಲಾಡಿಬಿಡುತ್ತಿದ್ದಳು. ಇಂಥವಳ ಮೋಡಿಗೆ ಅದ್ಹೇಗೆ ಬಂದು ಬೀಳುತ್ತವೆ ಈ ಬಕರಾ ಹುಡುಗರು ಅಂತ ನಮಗೆಲ್ಲ ಆಶ್ಚರ್ಯ. ಆದರೆ ಅವಳ ತಾಕತ್ತು ತಿಳಿಯಲು ಬಹಳ ದಿನ ಬೇಕಾಗಲಿಲ್ಲ.

ಎರಡು ವರ್ಷಗಳ ಪೋಸ್ಟ್ ಗ್ರ್ಯಾಜುಯೇಶನ್ ಕೋರ್ಸಿನಲ್ಲಿ ದಿನಗಳು ರೆಕ್ಕೆಪುಕ್ಕ ಕಟ್ಟಿಕೊಂಡು ಹಾರಿದವು. ಗೆಳೆತನದ ಬಂಧ ಹೆಚ್ಚು ಹೆಚ್ಚು ಗಟ್ಟಿಯಾಗುವ ಕಾಲ, ಅದೇ ಕೊನೆಯ ವರ್ಷ ಕೂಡ. ನೋಡನೋಡುತ್ತ ಸಿಲಬಸ್ ಮುಗಿದು, ನಾನು ದಿನಾಲೂ ಬೆಳಿಗ್ಗೆ ಹಾಸ್ಟೆಲಿನಲ್ಲಿ ತಿಂಡಿ ಮಾಡಿ ಒಮ್ಮೆ ಲೈಬ್ರರಿಗೆ ಹೋಗಿ ಕುಳಿತುಬಿಟ್ಟರೆ ಸಂಜೆಯ ತನಕ ಅಲ್ಲಾಡುತ್ತಿರಲಿಲ್ಲ. ಬೇಕಾದ ರೆಫರನ್ಸ್ ಪುಸ್ತಕಗಳು ಸಿಗುತ್ತಿದ್ದದರಿಂದ ನೋಟ್ಸ್ ಮಾಡಿಕೊಳ್ಳಲು ಅನುಕೂಲವಾಗುತ್ತಿತ್ತು. ಶಾಂತವಾತಾವರಣದ ಜೊತೆಗೆ ಒಳಗೆ ತಂಪು ಕೂಡಾ ಇರುತ್ತಿದ್ದರಿಂದ ಲೈಬ್ರರಿಯೇ ಅನುಕೂಲವೆನಿಸುತ್ತಿತ್ತು. ರೂಮಿನಲ್ಲೇ ಕುಳಿತರೆ ಅವರಿವರು ಬಂದು ತೊಂದರೆ ಮಾಡುವುದಲ್ಲದೆ, ನನಗೂ ಮಧ್ಯಾಹ್ನ ಒಂದು ಸಣ್ಣ ನಿದ್ದೆ ತೆಗೆದುಬಿಡುವ ಆಸೆಯಾಗುತ್ತಿತ್ತು. ಇವ್ಯಾವುದೂ ಇಲ್ಲದೆ ಸುಮ್ಮನೇ ಓದುವುದು, ಬರೆಯುವುದು ಲೈಬ್ರರಿಯಲ್ಲಿ ಮಾತ್ರ ಸಾಧ್ಯ. ಅವನೂ ಮಧ್ಯಾಹ್ನದ ನಂತರ ಲೈಬ್ರರಿಗೆ ಬರುತ್ತಿದ್ದುದೂ ಪ್ರಮುಖ ಆಕರ್ಷಣೆಯಾಗಿತ್ತು. ನನ್ನ ಓದು ಮುಗಿದು ನಾನು ಲೈಬ್ರರಿಯಿಂದ ಹೊರಹೊರಟೊಡನೆ ತಾನೂ ಎದ್ದುಬಂದು ಕೂಡಿಕೊಳ್ಳುತ್ತಿದ್ದ. ನಂತರ ಒಮ್ಮೊಮ್ಮೆ ಕ್ಯಾಂಟೀನಿಗೆ ಹೋಗಿ ಚಹಾ ಕುಡಿದು ಮಾತನಾಡುತ್ತ ಹಾಸ್ಟೆಲ್‌ವರೆಗೆ ಬಂದು ವಾಪಸ್ಸಾಗುತ್ತಿದ್ದ. ಕ್ಲಾಸುಗಳೆಲ್ಲಾ ಮುಗಿದ ಮೇಲೆ ಇದೊಂದೇ ದಾರಿ ಅವನನ್ನು ಭೇಟಿಯಾಗಲು. ಹಾಗಾಗಿ ಒಂದು ದಿನವೂ ಲೈಬ್ರರಿ ತಪ್ಪಿಸುವ ಮಾತೇ ಇಲ್ಲ.

ಅವತ್ತು ನಾನು ಓದು ಮುಗಿಸಿ ಹೊರಬಂದೆ. ಅವನೂ ಬರುತ್ತಿದ್ದಂತೆ ಸತ್ಯಭಾಮಾ ಅದೆಲ್ಲಿದ್ದಳೋ ಒಮ್ಮೇಲೆ ಒಕ್ಕರಿಸಿದಳು. ಅವನನ್ನು ತಡೆದು ಏನೋ ಮಾತನಾಡಲು